## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಜಿ.ಎಂ.ಗುಡ್ಡಪ್ಪ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ದಾವಣಗೆರೆ ಇವರು ಅಕ್ರಮ ಆಸ್ತಿ ಹೊಂದಿರುವ ಬಗ್ಗೆ ತನಿಖೆ ನಡೆಸಲು ಭ್ರಷ್ಟಾಚಾರ ನಿಗ್ರಹದಳಕ್ಕೆ ಪ್ರಕರಣವನ್ನು ವಹಿಸುವ ಬಗ್ಗೆ.

ಓದಲಾಗಿದೆ:-

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ. **Compt/ Uplok/ BD-4517/2014/DRE-1** ದಿನಾಂಕ. 16.02.2017.
2. ಮಾನ್ಯ ಉಪ ಲೋಕಾಯುಕ್ತ-2 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯಲ್ಲಿ ಸಲ್ಲಿಸಿರುವ ವರದಿ ಸಂಖ್ಯೆ **Compt/ Uplok/ BD-4517/2014/DRE-1** ದಿನಾಂಕ. 08.02.2017.

------

### ಪ್ರಸ್ತಾವನೆ

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 16.02.2017ರ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತ-2 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12(1) ರನ್ವಯ ನೀಡಿರುವ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕಳುಹಿಸುತ್ತಾ, ಮಾನ್ಯ ಉಪ ಲೋಕಾಯುಕ್ತ-2 ರವರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತ-2ರವರು ಲೋಕಾಯುಕ್ತ ಕಾಯ್ದೆ ಕಲಂ 12 (1)ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ಮಣಿಕಂಠ ಕೆ. ಬಿನ್ ಕರುಣಾಕರನ್, ಜಿಲ್ಲಾಧ್ಯಕ್ಷರು ಶ್ರೀರಾಮಸೇನೆ, ದಾವಣಗೆರೆ ಇವರು ಶ್ರೀ ಜಿ.ಎಂ.ಗುಡ್ಡಪ್ಪ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ದಾವಣಗೆರೆ ಇವರು ಸರ್ಕಾರದಿಂದ ಅನುಷ್ಠಾನಗೊಳಿಸಿರುವ ಸರ್ಕಾರದ ವಿವಿಧ ಯೋಜನೆಗಳಲ್ಲಿ ಕಳಪೆ ಮಟ್ಟದ್ದಾಗಿ ಕಾಮಗಾರಿಗಳನ್ನು ಕೈಗೊಂಡು ಅಕ್ರಮ ಆಸ್ತಿ ಹೊಂದಿದ್ದು, ಅವರ ಸ್ನೇಹಿತರು ಹಾಗೂ ಕುಟುಂಬದ ಸದಸ್ಯರ ಹೆಸರಿನಲ್ಲಿ ಅಕ್ರಮ ಆಸ್ತಿಯನ್ನು ಹೊಂದಿರುತ್ತಾರೆಂದು ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ.

ಸದರಿ ದೂರಿಗೆ ಸಂಬಂಧಿಸಿದಂತೆ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ದಾವಣಗೆರೆ ಇವರು ತನಿಖೆ ಕೈಗೊಂಡು ಸಲ್ಲಿಸಿರುವ ತನಿಖಾ ವರದಿಯಲ್ಲಿ ಈ ಕೆಳಕಂಡ ಅಂಶಗಳು ವ್ಯಕ್ತವಾಗುತ್ತವೆ:-

1. ಶ್ರೀ ಜಿ.ಇ.ಗುಡ್ಡಪ್ಪ, ಕಿರಿಯ ಇಂಜಿನಿಯರ್ ಇವರು ತಮ್ಮ ಸರ್ಕಾರಿ ಸೇವಾ ಅವಧಿಯಲ್ಲಿ ಗಳಿಸಿರುವ ಅಂದಾಜು ಆಸ್ತಿ ರೂ. 31,34,260/- ಗಳು
2. ಸದರಿಯವರು ಮಾಡಿರಬಹುದಾದ ಅಂದಾಜು ವೆಚ್ಚ ರೂ. 23,29,860/-
3. ಸದರಿಯವರ ಒಟ್ಟು ಆಸ್ತಿ ಮತ್ತು ವೆಚ್ಚ ರೂ. 54,64,120/-
4. ಸದರಿಯವರು ಗಳಿಸಿಬಹುದಾದ ಅಂದಾಜು ಆದಾಯ ರೂ. 53,50,000/-
5. ಸದರಿಯವರ ಅಸಮತೋಲನ ಆಸ್ತಿ ರೂ. 8,588/- ಆಗಿದ್ದು, ಶೇಕಡಾವಾರು 01.54 ಆಗಿರುತ್ತದೆ.

ಮೇಲಿನ ವಿವರಗಳ ಅನುಸಾರ ಅಸಮತೋಲನ ಆಸ್ತಿ ಗಳಿಕೆ ಪ್ರಕರಣವಾಗಿ ದೃಢಪಟ್ಟಿರುವುದಿಲ್ಲವೆಂದು ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ತನಿಖಾ ವರದಿಯನ್ನು ಲೋಕಾಯುಕ್ತ ಕಚೇರಿಯು ಪರಿಶೀಲಿಸಿದ್ದು, ಆಪಾದಿತ ನೌಕರರಾದ ಶ್ರೀ ಜಿ.ಇ.ಗುಡ್ಡಪ್ಪ, ಕಿರಿಯ ಇಂಜಿನಿಯರ್ ಇವರು ತಮ್ಮ ಹೆಸರಿನಲ್ಲಿ, ತಂದೆ ತಾಯಿಯ ಹೆಸರಿನಲ್ಲಿ ಮತ್ತು ಹೆಂಡತಿಯ ಹೆಸರಿನಲ್ಲಿ ಜಮೀನುಗಳನ್ನು ಖರೀದಿಸಿರುವುದು ಕಂಡುಬರುತ್ತದೆಯೆಂದು, ಆದ್ದರಿಂದ ತನಿಖಾಧಿಕಾರಿಯ ವರದಿಯನ್ನು ಆಪಾದಿತ ನೌಕರರಿಗೆ ಕಳುಹಿಸಿ, ವರದಿಯಲ್ಲಿ ನಮೂದಿಸಿರುವ ಜಮೀನುಗಳನ್ನು ಖರೀದಿಸಲು ಇಲಾಖಾ ಅನುಮತಿಯನ್ನು ಪಡೆಯಲಾಗಿದೆಯೇ ಎಂಬ ಬಗ್ಗೆ ಹಾಗೂ ಯಾವ ಆದಾಯದಿಂದ ಅವರ ತಂದೆ ತಾಯಿ ಹಾಗೂ ಪತ್ನಿ ಸದರಿ ಜಮೀನುಗಳನ್ನು ಖರೀದಿಸಿರುತ್ತಾರೆನ್ನುವ ಬಗ್ಗೆ ವಿವರಣೆಯನ್ನು ಪಡೆಯಲಾಗಿದ್ದು, ಸದರಿ ವಿವರಣೆಯನ್ನು ಪರಿಶೀಲಿಸಿ ಈ ಕೆಳಕಂಡ ಕಾರಣಗಳಿಗಾಗಿ ಆಪಾದಿತ ನೌಕರರು ಅಕ್ರಮ ಆಸ್ತಿಯನ್ನು ಹೊಂದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ತಿಳಿಸಿರುತ್ತಾರೆ:-

1. ಆಪಾದಿತರು ದಾವಣಗೆರೆ ಕಸಬಾ ಶಾಮನೂರು ವಿಭಾಗದ ವಿದ್ಯಾನಗರ ಕ್ರಾಸ್‌ನಲ್ಲಿ ರೂ. 3,60,000/-ಗಳಿಗೆ ನಿವೇಶನವನ್ನು ಖರೀದಿಸಿರುವ ಬಗ್ಗೆ ಮತ್ತು ಅದನ್ನು ಖರೀದಿಸಲು ಇಲಾಖಾ ಅನುಮತಿ ಪಡೆದಿರುವ ಬಗ್ಗೆ ಮತ್ತು ಸದರಿ ಜಮೀನು ಖರೀಸಿರುವ ಬಗ್ಗೆ ಇಲಾಖೆಗೆ ವರದಿಯನ್ನು ನೀಡಿರುವ ಬಗ್ಗೆ ಯಾವುದೇ ವಿಚಾರವನ್ನು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವುದಿಲ್ಲ.

2. ಆಪಾದಿತ ನೌಕರರು ತಮ್ಮ ಹೆಸರಿನಲ್ಲಿ ಮತ್ತು ಅವರ ಹೆಂಡತಿ ಹೆಸರಿನಲ್ಲಿ ಜಮೀನನ್ನು ಖರೀದಿ ಮಾಡಲು ಆದಾಯದ ಮೂಲವನ್ನು ತಿಳಿಸಿರುವುದಿಲ್ಲ.

ಮಾನ್ಯ ಉಪ ಲೋಕಾಯುಕ್ತ-2ರವರು ದೂರಿನಲ್ಲಿನ ಅಂಶಗಳನ್ನು, ತನಿಖಾ ವರದಿ ಹಾಗೂ ಆಪಾದಿತ ನೌಕರರು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಿದ್ದು, ಆಪಾದಿತ ನೌಕರರಾದ ಶ್ರೀ ಜಿ.ಎಂ.ಗುಡ್ಡಪ್ಪ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ದಾವಣಗೆರೆ ಇವರು ತಮ್ಮ ಹಾಗೂ ತಮ್ಮ ಹೆಂಡತಿಯ ಹೆಸರಿನಲ್ಲಿ ಜಮೀನನ್ನು ಖರೀದಿಸಲು ಇಲಾಖೆಯಿಂದ ಅನುಮತಿ ಪಡೆಯದೆ ಇರುವುದರಿಂದ ಅವರು ಭ್ರಷ್ಟಾಚಾರದಲ್ಲಿ ತೊಡಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆಯೆಂದು ತಿಳಿಸಿ, ಶ್ರೀ ಜಿ.ಎಂ.ಗುಡ್ಡಪ್ಪ, ಕಿರಿಯ ಇಂಜಿನಿಯರ್ ಇವರು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಅಕ್ರಮ ಆಸ್ತಿಯನ್ನು ಹೊಂದಿರುವ ಬಗ್ಗೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲು ಭ್ರಷ್ಟಾಚಾರ ನಿಗ್ರಹ ದಳ, ಇವರಿಗೆ ನಿರ್ದೇಶನ ನೀಡುವಂತೆ ಮಾನ್ಯ ಉಪ ಲೋಕಾಯುಕ್ತ-2ರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿ ಹಾಗೂ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಶ್ರೀ ಜಿ.ಎಂ.ಗುಡ್ಡಪ್ಪ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ದಾವಣಗೆರೆ ಇವರು ದಾವಣೆಗೆರೆ ಕಸಬಾ ಶಾಮನೂರು ವಿಭಾಗದ ವಿದ್ಯಾನಗರ ಕ್ರಾಸ್‌ನಲ್ಲಿ ರೂ. 3,60,000/-ಗಳಿಗೆ ನಿವೇಶನವನ್ನು ಖರೀದಿಸಿರುವ ಬಗ್ಗೆ ಮತ್ತು ಅದನ್ನು ಖರೀದಿಸಲು ಇಲಾಖಾ ಅನುಮತಿ ಪಡೆದಿರುವ ಬಗ್ಗೆ ಮತ್ತು ಸದರಿ ಜಮೀನು ಖರೀದಿಸಿರುವ ಬಗ್ಗೆ ಇಲಾಖೆಗೆ ವರದಿಯನ್ನು ನೀಡಿರುವ ಬಗ್ಗೆ ಯಾವುದೇ ವಿಚಾರವನ್ನು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿಲ್ಲದಿರುವುದು, ಆಪಾದಿತ ನೌಕರರು ತಮ್ಮ ಹೆಸರಿನಲ್ಲಿ ಮತ್ತು ಹೆಂಡತಿ ಹೆಸರಿನಲ್ಲಿ ಜಮೀನನ್ನು ಖರೀದಿ ಮಾಡಲು ಆದಾಯದ ಮೂಲವನ್ನು ತಿಳಿಸಿಲ್ಲದಿರುವುದು ಹಾಗೂ ಇಲಾಖೆಯಿಂದ ಅನುಮತಿ ಪಡೆಯದೆ ಇರುವುದು ದಾಖಲೆಗಳಿಂದ ಕಂಡು ಬರುತ್ತದೆ. ಹಾಗಾಗಿ ಶ್ರೀ ಜಿ.ಎಂ.ಗುಡ್ಡಪ್ಪ, ಕಿರಿಯ ಇಂಜಿನಿಯರ್ ಇವರು ಅಕ್ರಮ ಆಸ್ತಿಯನ್ನು ಹೊಂದಿರುವ ಬಗ್ಗೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲು ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳ, ಇವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ : ಗ್ರಾಅಪ 25 ಇಎಸ್‌ಕ್ಯೂ 2017 ಬೆಂಗಳೂರು,**
**ದಿನಾಂಕ. 21.08.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಜಿ.ಎಂ.ಗುಡ್ಡಪ್ಪ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ದಾವಣಗೆರೆ ಇವರು ಅಕ್ರಮ ಆಸ್ತಿ ಹೊಂದಿರುವ ಬಗ್ಗೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಪ್ರಕಾರ ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ ವಹಿಸಿ ಆದೇಶಿಸಿದೆ.

ಪ್ರಕರಣಕ್ಕೆ ಅಗತ್ಯವಿರುವ ಮೂಲ ಕಡತಗಳನ್ನು ಹಾಗೂ ದಾಖಲಾತಿಗಳನ್ನು ಮತ್ತು ಇನ್ನಿತರ ಮಾಹಿತಿಗಳನ್ನು ಭ್ರಷ್ಟಾಚಾರ ನಿಗ್ರಹದಳಕ್ಕೆ ಒದಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ ಇವರಿಗೆ ಸೂಚಿಸಿದೆ.

ಲೋಕಾಯುಕ್ತ ಕಚೇರಿಯು ಸರ್ಕಾರಕ್ಕೆ ಸಲ್ಲಿಸಿರುವ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ವರದಿ ಹಾಗೂ ಇತರೆ ದಾಖಲೆಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ.

ಈ ಪ್ರಕರಣದಲ್ಲಿ ಕಾನೂನು ರೀತ್ಯ ಕ್ರಮವನ್ನು ಆದಷ್ಟು ತ್ವರಿತವಾಗಿ ನಡೆಸಿ 6 ತಿಂಗಳ ಒಳಗಾಗಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

21/08/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

3. ಪೋಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹದಳ, ಖನಿಜ ಭವನ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ.
8. ಉಪ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಸಂಬಂಧಪಟ್ಟ ಆಪಾದಿತ ನೌಕರರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ ಇವರ ಮುಖಾಂತರ.
10. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
11. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು-ಬಿ&ಸಿ).
12. ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮ ಪಂಚಾಯತ್ ಶಾಖೆ, ಗ್ರಾ.ಅ.ಪಂ.ರಾಜ್ ಇಲಾಖೆ.
13. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
14. ಹೆಚ್ಚುವರಿ ಪ್ರತಿ :. ರಕ್ಷಾ ಕಡತ : ಕಂಪ್ಯೂಟರ್ ಸೆಲ್.